**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:13**

**ಎಸ್.ಸಿ. ಸಂಖ್ಯೆ: 501/23 ಸಿಡಬ್ಲ್ಯೂ:20**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಪಿ ಎಚ್ ಸುದರ್ಶನ್ |
| **ತಂದೆ ಹೆಸರು** | : | ದಿ. ತನಿಯಾ |
| **ವಯಸ್ಸು** | : | 58 |
| **ವೃತ್ತಿ** | : | ಪಿ ಎಸ್ ಐ ಕುಂದಾಪುರ ಸಂಚಾರಿ ಪೋಲೀಸು ಠಾಣೆ |
| **ವಾಸ** | : | ಕುಂದಾಪುರ |

**ದಿನಾಂಕ: 03-09-2025 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ 2021 ಸಪ್ಟೆಂಬರ್ ನಿಂದ 2023 ಜುಲೈ ವರೆಗೆ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:23-09-2022 ರಂದು ಶಂಕರನಾರಾಯಣ ಠಾಣಾ ಯು ಡಿ ಆರ್ ನಂಬ್ರ 32/2022 ರಲ್ಲಿ ಮೃತ ಶ್ರೀಮತಿ ಪಾರ್ವತಿ ರವರ ಶವ ಮಹಜರು ಜರುಗಿಸುವಂತೆ ಠಾಣಾ ಡಬ್ಲ್ಯು ಪಿಸಿ 2014 ಜ್ಯೋತಿ ಎನ್ನುವವರೊಂದಿಗೆ ಮಂಗಳೂರು ಸರಕಾರಿ ವೆನ್ ಲಾಕ್ ಆಸ್ಪತ್ರೆಯ ಶವಾಗಾರಕ್ಕೆ ತಲುಪಿಸಿ ಅಲ್ಲಿ ಚಾಸಾ.8, 9 ಮತ್ತು 10 ರವರ ಸಮಕ್ಷಮದಲ್ಲಿ ಶವ ಮಹಜರು ಕ್ರಮವನ್ನು 11.30 ಗಂಟೆಯಿಂದ 13.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಸಾಕ್ಷಿ ಸದ್ರಿ ಶವ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-11 ಸಿ ಎಂದು ಗುರುತಿಸಲಾಯಿತು.

ನಂತರ ಮೃತ ಶರೀರವನ್ನು ವೈದ್ಯಕೀಯ ಶವ ಪರೀಕ್ಷೆಗಾಗಿ ಡಬ್ಲ್ಯು ಪಿಸಿ 2014 ಜ್ಯೋತಿ ಇವರ ಭದ್ರಿಕೆಯಲ್ಲಿ ವೆನ್ ಲಾಕ್ ಆಸ್ಪತ್ರೆಯ ವೈದ್ಯಾಧಿಕಾರಿಯವರ ಮುಂದೆ ಹಾಜರುಪಡಿಸುವಂತೆ ಆದೇಶಿಸಿ ಕಳುಹಿಸಿಕೊಟ್ಟಿರುತ್ತೇನೆ. ವೈದ್ಯಕೀಯ ಶವ ಪರೀಕ್ಷೆ ಆದ ನಂತರ ಮೃತ ಶರೀರವನ್ನು ರಕ್ತ ಸಂಬಂಧಿಕರಿಗೆ ಬಿಟ್ಟು ಕೊಟ್ಟಿರುವುದಾಗಿ ಸದ್ರಿ ಸಿಬ್ಬಂದಿ ನನಗೆ ತಿಳಿಸಿರುತ್ತಾರೆ. ಹಾಗೂ ಮೃತ ದೇಹದ ವಿಸ್ರಾವನ್ನು ತೆಗೆಸುವರೇ ವೈದ್ಯರಿಗೆ ಮನವಿ

ಮಾಡಿರುತ್ತೇನೆ. ಶವ ಪರೀಕ್ಷೆ ಸಮಯ ಚಾಸಾ.4 ರಾಮ ನಾಯ್ಕ ಮತ್ತು ಆರೋಪಿ ಕೃಷ್ಣ ನಾಯ್ಕ ರವರ ಹೇಳಿಕೆ ಪಡೆದುಕೊಂಡಿರುತ್ತೇನೆ.

ನಂತರ ದಿನಾಂಕಃ24-09-2022 ರಂದು 11.00 ಗಂಟೆಗೆ ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿರುವಾಗ ಚಾಸಾ.1 ನೇ ಶ್ರೀಮತಿ ನಾಯ್ಕ ಎನ್ನುವವರು ಠಾಣೆಗೆ ಹಾಜರಾಗಿ ಒಂದು ಲಿಖಿತ ಫಿರ್ಯಾದಿಯನ್ನು ನೀಡಿದ್ದು ಅದರಲ್ಲಿ ತನ್ನ ತಮ್ಮ ಕೃಷ್ಣ ನಾಯ್ಕನು ತನ್ನ ತಾಯಿ ಪಾರ್ವತಿ ರವರಿಗೆ ಮರದ ಕೊರಡಿನಿಂದ ಹೊಡೆದು ಸಾಯಿಸಿದ್ದಾನೆ ಅಂತ ನೀಡಿದ ದೂರನ್ನು ಸ್ವೀಕರಿಸಿ ಅದನ್ನು ನಮ್ಮ ಠಾಣಾ ಅಪರಾಧ ಸಂಖ್ಯೆ 94/2022 ರಂತೆ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಫಿರ್ಯಾದಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-24 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-24 ಎ ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ತನಿಖಾಧಿಕಾರಿಯವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ. ಕೆ. ವಕೀಲರಿಂದ**

ಈ ಪ್ರಕರಣದಲ್ಲಿ ನಾನು ಫಿರ್ಯಾದಿ ಪಡೆದುಕೊಳ್ಳುವ ಪೂರ್ವದಲ್ಲೇ ಚಾಸಾ.15 ನೇಯವರು ಮೃತ ಪಾರ್ವತಿಗೆ ಸಂಬಂಧಪಟ್ಟಂತೆ ಯುಡಿಆರ್ ನ್ನು ತಯಾರಿಸಿದ್ದರು. ಯುಡಿಆರ್ ಸಮಯದಲ್ಲಿ ಮೃತ ಸಂಬಂಧಿ ರವರ ಹೇಳಿಕೆಯನ್ನು ನಾನು ಪಡೆದುಕೊಂಡಿದ್ದು ಅದು ನಮ್ಮ ಠಾಣಾ ಮಹಿಳಾ ಸಿಬ್ಬಂದಿ ಶ್ರೀಮತಿ ಜ್ಯೋತಿ ರವರು ಬರೆದುಕೊಂಡಿರುತ್ತಾರೆ. ಫಿರ್ಯಾದಿ ನೀಡಲು ತಡವಾದ ಕಾರಣಗಳನ್ನು ನಾನು ಪ್ರಥಮ ವರ್ತಮಾನ ವರದಿಯಲ್ಲಿ ಕಾಣಿಸಿದ್ದೇನೆ. ನಿಪಿ-1 ರಂತೆ ಫಿರ್ಯಾದಿದಾರಳು ನನ್ನ ಮುಂದೆ ಯಾವುದೇ ಫಿರ್ಯಾದಿ ನೀಡಿಲ್ಲ ಎಂದರೆ ಸರಿ ಅಲ್ಲಾ. ನಾನು ಯಾವುದೇ ಸತ್ಯವನ್ನು ಪರಿಶೀಲಿಸದೇ ತಾಂತ್ರಿಕವಾಗಿ ಫಿರ್ಯಾದಿಯನ್ನು ಪಡೆದುಕೊಂಡು ಆರೋಪಿತನ ವಿರುದ್ಧ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ ಅಲ್ಲಾ. ಯುಡಿಆರ್ ಸಮಯದಲ್ಲಿ ಮೃತ ಪಾರ್ವತಿ ಇವರ ಸಂಬಧಿಕರಾದ ರಾಮ ನಾಯ್ಕ ಮತ್ತು ಆರೋಪಿತನ ಹೇಳಿಕೆ ನಾನು ಪಡೆದುಕೊಂಡೇ ಇಲ್ಲಾ ಎಂದರೆ ಸರಿ ಅಲ್ಲಾ.

**<u>ಮರು ವಿಚಾರಣೆಃ</u>** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**